* ಕೆಲವೊಮ್ಮೆ ಅನಸ್ತೀಶಿಯಾ ಪೂರ್ಣವಾಗದೆ ಸಂಪೂರ್ಣವಾಗಿ ನೋವನ್ನು ತೆಗೆಯಲು ಸಾಧ್ಯವಾಗದಿರಬಹುದು.

* ರಕ್ತದೊತ್ತಡ ಕಡಿಮೆಯಾಗಿ ತಲೆಸುತ್ತು, ವಾಕರಿಕೆ ಉಂಟಾಗಬಹುದು. ಇದಕ್ಕಾಗಿಯೇ ಡ್ರಿಪ್ಸ್ ಹಾಕಲಾಗುತ್ತದೆ.


* ಸೊಂಟದ ಕೆಳಗೆ ಸಂವೇದನೆ ಇಲ್ಲದಿರುವುದರಿಂದ ಮೂತ್ರವಿಸರ್ಜನೆ ಮಾಡಬೇಕೆಂಬುದೇ ತಿಳಿಯುವುದಿಲ್ಲ. ಹಾಗಾಗಿ ಕ್ಯಾತೆಟರ್ ಹಾಕಲಾಗುತ್ತದೆ.

* ಎಪಿಡ್ಯೂರಲ್ ಅನಸ್ತೀಶಿಯಾದಿಂದಾಗಿ ಹೆರಿಗೆಯ ಎರಡನೇ ಹಂತದ ಅವಧಿ ಹೆಚ್ಚಾಗಬಹುದು.

## ನಿಜವಾಗಿ ಆಗುವುದೇನು?

ಎಪಿಡ್ಯೂರಲ್ ಇಂಜೆಕ್ಷನ್ ಕೊಟ್ಟ ಮೇಲೆ ಗರ್ಭಿಣಿ ಓಡಾಡುವಂತಿಲ್ಲ, ಮಲಗಿಯೇ ಇರಬೇಕಾಗುತ್ತದೆ. ಆಕೆಯ ಹೊಟ್ಟೆಗೆ ಬೆಲ್ಟ್ ಹಾಕಿ NST ಮೆಷೀನ್ ಗೆ ಸೇರಿಸಲಾಗುತ್ತದೆ. ಇಲ್ಲಿ ಮಗುವಿನ ಹೃದಯದ ಬಡಿತ ನಿರಂತರವಾಗಿ ಮೂಡಿಬರುತ್ತದೆ.ಇಂಜೆಕ್ಷನ್ ಕೊಟ್ಟಮೇಲೆ ಅರಿವಳಿಕೆಯ ವೈದ್ಯರು ಕನಿಷ್ಠ ಅರ್ಧ ಗಂಟೆಯ ಕಾಲ ಗರ್ಭಿಣಿಯ ಹತ್ತಿರ ಕುಳಿತು ಕೊಳ್ಳಬೇಕು. ಆದರೆ ಯಾವ ವೈದ್ಯರೂ ಹಾಗೆ ಮಾಡುವುದಿಲ್ಲ. ಇಂಜೆಕ್ಷನ್ ಕೊಟ್ಟ ಮೇಲೆ ಮಗುವಿನ ಹೃದಯದ ಬಡಿತದಲ್ಲಿ ಏರುಪೇರಾಗುವ ಸಾಧ್ಯತೆಗಳಿವೆ (ಸಾಮಾನ್ಯವಾಗಿ ಮಗುವಿನ ಬಡಿತ 110 ರಿಂದ 160 ಇರಬೇಕು). ಬಹಳಷ್ಟು ವೇಳೆ ಅದು ಸಹಜ ಸ್ಥಿತಿಗೆ ಬರುತ್ತದೆ. ಕೆಲವೊಮ್ಮೆ ಏರುಪೇರು ನಿರಂತರವಾಗಿ ಕಂಡು ಬಂದರೆ ಕೂಡಲೇ ಸಿಜೇರಿಯನ್ ಮಾಡಬೇಕಾಗುತ್ತದೆ. ಇದನ್ನು ಯಾವ ವೈದ್ಯರೂ ಗರ್ಭಿಣಿಯ ಸಂಬಂಧಿಕರಿಗೆ ಹೇಳಿರುವುದಿಲ್ಲ.

ಇಂಜೆಕ್ಷನ್ ಕೊಟ್ಟಾಗ ಗರ್ಭಿಣಿಯ ಗರ್ಭಾಶಯದಲ್ಲಿ ಆಗುತ್ತಿರುವ ಸಂಕೋಚನಗಳ ನೋವು ತಿಳಿಯುವುದಿಲ್ಲ. ಆರಾಮವಾಗಿ ಮಲಗುತ್ತಾಳೆ. ಸಾಮಾನ್ಯವಾಗಿ ಈ ಇಂಜೆಕ್ಷನ್‌ನ ಪರಿಣಾಮ ಎರಡು ಗಂಟೆಗಳ ಕಾಲ ಇರುತ್ತದೆ. ಅಕಸ್ಮಾತ್ ಈ ಅವಧಿಯೊಳಗೆ ಗರ್ಭಾಶಯ ಪೂರ್ತಿ ತೆರೆದುಕೊಂಡು ಬಿಟ್ಟರೆ (ಇದು ಹೆರಿಗೆಯ ಮೊದಲನೆಯ ಹಂತ), ಈಗ ಹೆರಿಗೆಯ ಎರಡನ ಹಂತ ಆರಂಭವಾದಂತೆ. ಈಗ ಗರ್ಭಿಣಿ, ಸಂಕುಚನವಾದಾಗ ಕೆಳಗೆ ಮುಕ್ಕಬೇಕು. ಗರ್ಭಾಶಯದಿಂದ ಯೋನಿಯ ತನಕ ಮಗು ಬರುವುದು ಎರಡನೆಯ ಹಂತ. ಹೆರಿಗೆಗೆ ಗರ್ಭಾಶಯದ ಸಂಕುಚನ ಶೇಕಡಾ 50 ಹಾಗೂ ಗರ್ಭಿಣಿಯ ಮುಕ್ಕುವಿಕೆ ಶೇಕಡಾ 50 ರಷ್ಟು ಪ್ರಯತ್ನ ಕಾರಣವಾಗುತ್ತದೆ. ಆದರೆ ಇಲ್ಲಿ ಗರ್ಭಿಣಿಗೆ ಸೊಂಟದಿಂದ ಕೆಳಗೆ ಸಂವೇದನೆ (sensation) ಇರುವುದಿಲ್ಲ. ಹಾಗಾಗಿ ಮುಕ್ಕಲು ಸಾಧ್ಯವಾಗುವುದೇ ಇಲ್ಲ. ಇದರಿಂದ ಸಿಜೇರಿಯನ್ ಮಾಡಬೇಕಾಗುತ್ತದೆ.





ಹಾಗೊಂದು ವೇಳೆ ಅನಸ್ತೀಶಿಯಾ ದ ಪ್ರಭಾವ ಮುಗಿದ ಮೇಲೆ ಮೊದಲನೇ ಹಂತ ಮುಗಿದಿದೆ ಎಂದಿಟ್ಟುಕೊಳ್ಳೋಣ, ಆಗ ಒಳಗಿರುವ ಕಂದಮ್ಮನ ಮೇಲೆ ಅನಸ್ತೀಶಿಯಾ ದ ಪ್ರಭಾವವಂತೂ ಖಂಡಿತಾ ಇರುತ್ತದೆ. ಹಾಗಾಗಿ ಮಗು ಹುಟ್ಟಿದೊಡನೆ ಅಳುವುದಿಲ್ಲ.ಆಗ ಮಗುವಿಗೆ ಚಿಕಿತ್ಸೆ ಬೇಕಾಗುತ್ತದೆ. ಬಹಳಷ್ಟು ವೇಳೆ ಮಗುವಿಗೆ ಡ್ರಿಪ್ಸ್ ಹಾಕಿ NICU ನಲ್ಲಿ ಇರಬೇಕಾಗುತ್ತದೆ.

ಕೆಲವೊಮ್ಮೆ ಗರ್ಭಿಣಿಯರಿಗೆ ಅನಸ್ತೀಶಿಯಾ ದ ಅಡ್ಡಪರಿಣಾಮವಾಗಿ ಜ್ವರ ಬರುವುದುಂಟು. ಹಾಗಾದಾಗ ಜ್ವರದಿಂದ ಬಳಲಿದ ಗರ್ಭಿಣಿ ಹೆರಿಗೆಯ ನೋವನ್ನು ಸಹಿಸದೆ ಮತ್ತಷ್ಟು ಅನಸ್ತೀಶಿಯಾ ಬಯಸುತ್ತಾಳೆ. ಎಪಿಡ್ಯೂರಲ್ ಅನಸ್ತೀಶಿಯಾ ಕೊಟ್ಟ ತಕ್ಷಣ ಸಿಜೇರಿಯನ್ ಮಾಡಿಬಿಟ್ಟರೆ ಮಗುವಿಗೆ ಯಾವ ತೊಂದರೆಯೂ ಆಗುವುದಿಲ್ಲ. ಯಾವುದೇ ಕಾರಣಕ್ಕೆ ಎಪಿಡ್ಯೂರಲ್ ಅನಸ್ತೀಶಿಯಾ ಕೊಟ್ಟರೂ ಜೀವನ ಪರ್ಯಂತ ಬೆನ್ನು ನೋವು ಕಾಡುತ್ತಿರುತ್ತದೆ.

## ಏನು ಮಾಡಬೇಕು?

ಹೆರಿಗೆ ಎಂಬುದು ಹೆಣ್ಣುಮಕ್ಕಳ ಬಾಳಿನಲ್ಲಿ ಪುನರ್ಜನ್ಮ ವಿದ್ದಂತೆ ಎಂಬ ಮಾತು ಸತ್ಯ. ಆದರೆ ಹೆರಿಗೆ ಎಂಬ ಹಂತವನ್ನು ಯಶಸ್ವಿಯಾಗಿ ದಾಟಲು ಅವರಿಗೆ ತರಬೇತಿಯ ಅವಶ್ಯಕತೆ ಇದೆ. ತರಬೇತಿಯಿಂದ ಗರ್ಭಿಣಿಗೆ ಹೆರಿಗೆ ಎಂದರೇನು, ಆ ಸನ ಸಮಯದಲ್ಲಿ ಸಂಕುಚನ ಬಂದಾಗ ಏನು ಮಾಡಬೇಕು, ಏನು ಮಾಡಬಾರದು ಎಂಬುದು ಅರ್ಥವಾಗುತ್ತದೆ.

ಅಧ್ಯಯನಗಳ ಪ್ರಕಾರ ಗರ್ಭಿಣಿಗೆ ಮುಂಚಿನಿಂದಲೇ ತರಬೇತಿ ನೀಡಿದರೆ ಆಕೆ ಈ ಹಂತವನ್ನು ಧೈರ್ಯವಾಗಿ ಎದುರಿಸುತ್ತಾಳೆ. ಏನೂ ಅರಿವಿಲ್ಲದಾಗ ನೋವಿಗೆ ಹೆದರಿ ಕಂಗಾಲಾಗುತ್ತಾಳೆ. ಆಕೆಯ ಜೊತೆಯಲ್ಲಿ ಬರುವವರು ಅವಳಿಗೆ , ಹೆರಿಗೆ ಅಷ್ಟೊಂದು ತ್ರಾಸದಾಯಕವಾಗಿದ್ದರೆ ಯಾರೂ ಹೆರುತ್ತಲೇ ಇರಲಿಲ್ಲ, ಎಷ್ಟೋ ಜನ ಮಹಿಳೆಯರು ತಾಯಿಯಾಗಬೇಕೆಂದು ಎಷ್ಟೆಲ್ಲಾ ಹರಕೆ ಕಟ್ಟಿಕೊಳ್ಳುತ್ತಾರೆ. ನೀನು ಅದೃಷ್ಟವಂತೆ. ಸ್ವಲ್ಪ ಸಮಯದಲ್ಲೇ ತಾಯಿಯಾಗಲಿದ್ದೀಯ ಎಂದೆಲ್ಲಾ ಮಾತನಾಡುತ್ತಾ ಅವಳಿಗೆ ಆತ್ಮಸ್ಥೈರ್ಯ ತುಂಬಬೇಕು.